ಸಂಗತಿಯಾದರೂ, ನಗುವೆಂಬ ನಗುವನ್ನೂ ಅಳೆದುಹೊಂಚುವ ಮತ್ತು ಹೊಂಚಿದ್ದನ್ನೂ ಕಡಿದು – ಕಡಿಕಡಿಮೆ ಸೂಸುವ ಆಸಾಮಿ! ಟೋಟಲೀ ಟೋಟಲೀ ಟೀ ಟೋಟಲರಾದ ನನ್ನನ್ನು ಯಾರೇ ಆಗಲಿ, ಸಂಜೆಯ ಬಳಿಕದ ಗಮ್ಮತ್ತಿನ ವಿಷಯಕ್ಕಾಗಿ – ಸುಮ್ಮಾಗಾದರೂ ಎಣಿಸುವುದುಂಟೆ? ಊಹ್ಞೂಂ, ಆಟಕ್ಕುಂಟು ಲೆಕ್ಕಕ್ಕಿಲ್ಲ ಅನ್ನುವರಲ್ಲ, ಅಂತಹ ಲೆಕ್ಕ. ಪಾರ್ಟಿಗೀರ್ಟಿ ಅಂತಂದರಂತೂ – ನಾನೆಂಬ ನಾನಿರಲಿ, ನನ್ನ ಹೆಸರೂ ಟೋಟಲೀ ಟೋಟಲೀ ಔಟ್!

ಇಂತಹ ನನ್ನನ್ನು, ಈ ಶರ್ಲೀ ವರ್ಕೀ ನೆನೆದಿದ್ದಾಳೆಂಬುದೂ ನನ್ನ ಮಟ್ಟಿಗಿನ ಆಶ್ಚರ್ಯವೇ ಹೌದು! ಅಥವಾ, ನಾನು ನನ್ನ ಜೀವನದಲ್ಲಿ ಮೊಟ್ಟ ಮೊದಲ ಸರ್ತಿ ಕೈಕೊಂಡ ತರ್ಪಣದಷ್ಟೇ ಅಜೀಬನೆ ಸಂಗತಿ ಅನ್ನಬಹುದು!!

## 2

ಫೋನ್ ಮಾಡು... ಆದಷ್ಟು ಬೇಗ... ಎಂದು ಬರೆದಿದ್ದ ಶರ್ಲೀ ವರ್ಕಿಯ ಮೆಸೇಜುಗಳನ್ನು ಇನ್ನೆರಡು ಸರ್ತಿ ಓದಿಕೊಂಡು, ನನ್ನೊಡನೆ ಮಾತನಾಡುವ ತುರ್ತಿನ ಸಂಗತಿಯಾದರೂ ಏನಂತ – ನನ್ನನಗೇ ಅಂದುಕೊಂಡು, ಬಹುಶಃ ನನ್ನ ನಲವತ್ತೂ ಚಿಲ್ಲರೆ ವಯಸ್ಸಿನ ಈ ಬದುಕಿನಲ್ಲಿ ಇದೇ ಮೊಟ್ಟಮೊದಲ ಸರ್ತಿ, ಈ ಹೆಣ್ಣಿನೊಡನೆ ನೇರವಾಗಿ ಮಾತನಾಡಲಿಕ್ಕಿದ್ದೇನೆಂತಲೂ ಎಣಿಸಿಕೊಂಡೂ – ನಾನು ಕಡೆಗೂ ಫೋನು ಹಚ್ಚಿದ್ದಾಯಿತು!

'ಹೇ ಸರಸ್ಸ್...' ಅನ್ನುತ್ತಲೇ ಹೆಣ್ಣು ಮಾತಿಗಿಳಿದಳು. 'ಹೇಗಿದ್ದೀ? ಇದೇ ಮೊದಲ ಸಲ ಅಲ್ಲವಾ, ನಾನೂ ನೀನೂ ಮಾತನಾಡುತಿರೋದು? ಐ ಮೀನ್ – ಹೀಗೆ ನೇರ ಮಾತಾಡುತಾ ಇರೋದು?' ಎಂದೆಲ್ಲ ಕುಶಲೋಪರಿಗಳಾದವು. 'ಏನು ಗೊತ್ತಾ? ನಿನ್ನಿಂದ ಒಂದು ಫೇವರ್ ಆಗಬೇಕಿತ್ತು...' ಸೀದಾ ವಿಷಯಕ್ಕೆ ಬಂದಳು.

ವಿಚಿತ್ರವೆನ್ನಿಸಿತು!

ಈ ಬೆಂಗಳೂರಿನಂತಹ ಶಹರದ ಅತ್ಯುನ್ನತ ರೀತಿರಿವಾಜಷ್ಟನ್ನೂ ತನ್ನೊಬ್ಬಳ ಹುಟ್ಟಾಕಟ್ಟಾ ಹಕ್ಕುಬಾಧ್ಯತೆಯೆಂಬಂತೆ ಮೈವೆತ್ತಿಕೊಂಡಿರುವ – ಈ ಹೆಣ್ಣಿಗೆ, ಅವಳೊಡನೊಂದು ಸ್ನೇಹಲ ಸಂಬಂಧವನ್ನಿರಲಿ, ಸರಿಯಾದ ಮಾತುಕತೆಯನ್ನೂ ಈ ತನಕ ಚಿಗಿಯಿಸಿಕೊಂಡಿಲ್ಲದ ನಾನು, ಏನು ತಾನೇ ಸಹಾಯಕ್ಕೆ ಆಗಬಲ್ಲೆ? ಅಥವಾ, ನನ್ನಿಂದ ಇವಳು ಅಪೇಕ್ಷಿಸುವುದಾದರೂ ಏನು? ತನ್ನಲ್ಲಿ ಇದ್ದಿಲ್ಲದ ಏನನ್ನು ನನ್ನಿಂದ ಬಯಸಿರಬಹುದು?

'ಹವ್ವ್ ಎಟ್ ಆಲ್ ಕೆನ್ನೈ, ಶರ್ಲೀ... ಆಗೋ ಅಂಥದ್ದಾದರೆ ಖಂಡಿತಾ ಮಾಡುತೀನಿ...' ಹಲವೆಂಟು ಯೋಚನೆಗಳ ನಡುವೆಯೇ ಹೇಳಿದೆ.

'ಏನಿಲ್ಲ... ಕೆನ್ ಯು ಫಿಕ್ಸ್ ಅಪ್ ಸಮ್ ಡೆತ್ ರಿಚುಅಲ್ ಫಾರ್ ಎ ಫ್ರೆಂಡ್ ಆಫ್ ಮೈನ್?' – ಎಂದು ಶರ್ಲೀ ವರ್ಕಿ ಕೇಳಿದ್ದೇ ತಡ ಒನ್ನಮೂನೆ ಹೌಹಾರಿದ್ದಾಯಿತು! ತಲೆಬುಡ ಅರ್ಥವಾಗದೆ ಏನೆತ್ತವೆಂತೆಂದು ತಿಣಿಕಿದ್ದಾಯಿತು! ಇದ್ದಕ್ಕಿದ್ದಂತೆ ಫೋನು ಮಾಡಿ – ತನ್ನ ಗೆಳೆಯನೊಬ್ಬನ ಸಾವಿನ ಬಳಿಕದ ಆಚರಣೆಗಳಿಗೆ ಏನನ್ನೋ 'ಫಿಕ್ಸ್' ಮಾಡಿಕೊಡು ಅಂತಂದರೆ?!

'ಶಾಕ್ ಆಗಿರುತ್ತೆ ಅಲ್ಲವಾ?' ಶರ್ಲೀ ವರ್ಕಿ ಹೇಳಿದಳು. 'ಇರು... ಲೆಟ್ ಮಿ ಎಕ್ಸ್‌ಪ್ಲೇನ್... ನನಗೆ ಒಬ್ಬ ಸ್ನೇಹಿತ ಇದ್ದ. ಅ ಸೀನಿಯರ್ ಜೆಂಟಲ್‌ಮನ್... ಎಪ್ಪತ್ತೆಪ್ಪತ್ತೈದು ವಯಸ್ಸೇನೋ... ಇದ್ದ ಅಂತ ಯಾಕೆ ಹೇಳುತಿದೀನಿ ಅಂದರೆ ನಿನ್ನೆ ಆತ ತೀರಿಕೊಂಡರು... ಅಂದರೆ ಈಗ ಆತ ಈ ಜಗತ್ತಿನಲ್ಲಿ ಇಲ್ಲ. ನಾನೇ ಆತನನ್ನ ಕ್ರಿಮೇಟ್ ಮಾಡಿ ಬಂದೆ... ಮನುಷ್ಯ ನನ್ನ ಸ್ನೇಹಿತ ಅಂದರೆ ಬರೇ ನನ್ನ ಸ್ನೇಹಿತ ಅಲ್ಲ... ಹಿ ವಾಸ್ ಎ ಫ್ರೆಂಡ್ ಆಫ್ ಮೈ ಹಸ್ಬೆಂಡ್ ವಿರಾಟ್ ಟೂ... ಹಿ ವಾಸ್ ಮೋರ್ ದ್ಯಾನ್ ಎ ಫ್ರೆಂಡ್ ಟು ಬೋತ್ ಆಫ್ ಅಸ್!'